ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-560056

ಸಂಖ್ಯೆ: ಇಎಸ್‌ಟಿ-1/ಇ1/ಸುತ್ತೋಲೆ/2014

ದಿನಾಂಕ: 27.04.2021

## ಸು ತ್ತೋ ಲೆ

**ವಿಷಯ:** ಕೋವಿಡ್ -19 ವೈರಸ್‌ನ ಸೋಂಕು ತಡೆಗಟ್ಟುವಿಕೆ ಮುಂಜಾಗ್ರತಾ ಕ್ರಮವಾಗಿ ವಿಶ್ವವಿದ್ಯಾಲಯದ ಕಛೇರಿ / ವಿಭಾಗಗಳನ್ನು ಮುಚ್ಚುತ್ತಿರುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 158 ಟಿಎನ್‌ಆರ್ 2020 ದಿನಾಂಕ:26.04.2021.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 87 ಡಿಇವಿ 2021 ದಿನಾಂಕ: 27.04.2021.
3. ಕುಲಪತಿಯವರ ಅನುಮೋದನೆ ದಿನಾಂಕ: 27.04.2021.

*****

ಮೇಲ್ಕಂಡ ಉಲ್ಲೇಖಿತ (1) ಮತ್ತು (2) ರ ಸರ್ಕಾರದ ಆದೇಶಗಳನ್ವಯ, ಕೋವಿಡ್-19 ವೈರಸ್‌ನ ಸೋಂಕು ತಡೆಗಟ್ಟುವಿಕೆ ಮುಂಜಾಗ್ರತಾ ಕ್ರಮವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಯವರಿಗೆ ದಿನಾಂಕ 28.04.2021 ರಿಂದ 11.05.2021 ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಾದ ಮಾನ್ಯ ಕುಲಪತಿಯವರು/ ಕುಲಸಚಿವರು/ ಕುಲಸಚಿವರು(ಮೌ) ಮತ್ತು ವಿತ್ತಾಧಿಕಾರಿಗಳ ಆಪ್ತ ಕಾರ್ಯಲಯ/ ಕಛೇರಿಗಳು ಸೇರಿದಂತೆ **ಅಭಿಯಂತರರ ವಿಭಾಗ, ಆರೋಗ್ಯ ಕೇಂದ್ರ ಮತ್ತು ಸಾರಿಗೆ ವಿಭಾಗಗಳನ್ನು ಹೊರತುಪಡಿಸಿ** ಇನ್ನುಳಿದ ಎಲ್ಲಾ ಕಛೇರಿ ವಿಭಾಗಗಳಿಗೆ ಈ ಕೆಳಗೆ ತಿಳಿಸಿರುವ ಷರತ್ತಿನೊಂದಿಗೆ ಮುಚ್ಚಲಾಗಿರುತ್ತದೆ;

1. ವಿಶ್ವವಿದ್ಯಾಲಯದ ಎಲ್ಲಾ ಬೋಧಕೇತರ ಸಿಬ್ಬಂದಿಗಳಿಗೆ ದಿನಾಂಕ: 11.05.2021 ರವರೆಗೆ ಮನೆಯಿಂದಲೇ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.
2. ಬೋಧಕೇತರ ಎಲ್ಲಾ ಸಿಬ್ಬಂದಿ ವರ್ಗದವರನ್ನು ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕಿಸಲು ಅವರ ದೂರವಾಣಿ ಸಂಖ್ಯೆಗಳನ್ನು ಅವರ ಮೇಲಾಧಿಕಾರಿಯವರಿಗೆ ನೀಡತಕ್ಕದ್ದು.
3. ಈ ಅವಧಿಯಲ್ಲಿ ಬೋಧಕೇತರ ಸಿಬ್ಬಂದಿಗಳು ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ ಹಾಗೂ ವಿಶ್ವವಿದ್ಯಾಲಯಕ್ಕೆ ಸಿಬ್ಬಂದಿಗಳ ಸೇವೆಯು ಅಗತ್ಯವಿದ್ದಾಗ ಸಂಬಂಧಪಟ್ಟ ವಿಭಾಗ/ಕಛೇರಿಯ ಮುಖ್ಯಸ್ಥರು ಇಚ್ಚಿಸಿದಲ್ಲಿ ಅವರು ಬಯಸುವಂತಹ ಅಧಿಕಾರಿ/ ನೌಕರರುಗಳು ಯಾವುದೇ ಕಾರಣ ನೀಡದೆ ಕಡ್ಡಾಯವಾಗಿ ಕಛೇರಿಗೆ ಹಾಜರಾಗತಕ್ಕದ್ದು.

ಆದೇಶದ ಮೇರೆಗೆ

K. Jyothi 27/4/2021

ಕುಲಸಚಿವರು

ಅಗತ್ಯ ಕ್ರಮಕ್ಕಾಗಿ:

ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರು / ಎಲ್ಲಾ ವಿಭಾಗದ ಮುಖ್ಯಸ್ಥರು / ಪುರುಷ/ಮಹಿಳಾ ವಿದ್ಯಾರ್ಥಿ ನಿಲಯಗಳ ಮುಖ್ಯ ಕ್ಷೇಮಪಾಲಕರ/ಅಧಿಕಾರಿಗಳ/ ಬೋಧಕ / ಬೋಧಕೇತರ ಸಿಬ್ಬಂದಿ ವರ್ಗದವರ – **ಆದ್ಯ ಗಮನಕ್ಕೆ ಹಾಗೂ ತಮ್ಮ ಅಧೀನಕ್ಕೆ ಒಳಪಡುವ ಎಲ್ಲಾ ಬೋಧಕ / ಬೋಧಕೇತರರು / ಗಮನಕ್ಕೆ ತರಲು ಕೋರಲಾಗಿದೆ.**

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಸಿಸ್ಟಮ್ ಅನಾಲಿಸ್ಟ್, ಇ-ಗವರ್ನೆಸ್ಸ್ ಸೆಲ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-**ವೆಬ್‌ಸೈಟ್‌ನಲ್ಲಿ ಈ ಸುತ್ತೋಲೆಯನ್ನು ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ.**
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ.
5. ಕಛೇರಿ ಪ್ರತಿ.